ರೈತರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ತೊಂದರೆಯಾಗುತ್ತದೆ ಈ ವಿಚಾರ ಸರ್ಕಾರದ ಗಮನದಲ್ಲಿದೆ. ಈ ಹಿನ್ನೆಲೆಯಲ್ಲಿ ಈ ಒಂದು ಕಾರ್ಯಕ್ರಮವನ್ನು ಬೇಗ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ.

ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ

೩೩೭. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ನೀರಾವರಿ ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ಯೋಜನೆ (ಮೂಲತಿ ರಿಸರ್ವಾಯರ್ ಬಿಟ್ಟು) ಗಾಜನೂರು ಹತ್ತಿರ ೧೪ ಆಡಿ ಗೇಟ್ ಎತ್ತರಿಸುವ ಯೋಜನೆಯ ಅಂದಾಜು ವೆಚ್ಚವೆಷ್ಟು.

ಆ) ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು.

ಇ) ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಮನ್ನಣೆಗಾಗಿ ಕಳಿಸಿಕೊಡಲಾಗಿದೆ ಇಲ್ಲವಾದಲ್ಲಿ ಎಂದು ಕಳಿಸಿಕೊಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೨೬೧.೪೧ ಕೋಟಿ ರೂಪಾಯಿಗಳು.

ಆ) ಯೋಜನಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಯೋಜನಾ ವರದಿಗೆ ಕೃಷ್ಣಾ ಜಲಾನಯನ ಪ್ರದೇಶದ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತ ನಂತರ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ಅಪ್ಪರ್ ತುಂಗಾ ಯೋಜನೆ ಬಗ್ಗೆ ನಾವು ಅನೇಕ ವರ್ಷಗಳಿಂದ ಕೇಳುತ್ತಿದ್ದೇವೆ. ನಾನು ಕೇಳುವ ಕೆಲವೊಂದು ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆ ಎನ್ನುವ ಭರವಸೆ ನನಗೆ ಇದೆ. ಈ ಯೋಜನೆಯಿಂದ ನೀರಾವರಿ ಆಗುವ ಜಮೀನು ಎಷ್ಟು ಇದೆ ? ಮತ್ತು ಮುಳುಗಡೆಯಾಗುವಂತಹ ಪ್ರದೇಶ ಎಷ್ಟು ? ಮತ್ತು ಈ ಪ್ರಾಜೆಕ್ಟ್ ರಿಪೋರ್ಟ್ ಅಂಡರ್ ಕನ್ಸಿಡರೇಷನ್ ಎಂದು ಸರ್ಕಾರ ಮೇಲಿಂದ ಮೇಲೆ ಹೇಳುತ್ತಿದೆ. ಇದನ್ನು ೨೫ ವರ್ಷಗಳಿಂದ ಹೇಳುತ್ತಿದ್ದಾರೆ. ಈ ಕನ್ಸಿಡರೇಷನ್ ಎನ್ನುವುದು ಯಾವಾಗ ಮುಗಿಯುತ್ತದೆ ? ಇದರ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಲಾಗುತ್ತದೆಂದು ಸ್ಪಷ್ಟವಾಗಿ ದಿನಾಂಕವನ್ನು ಹೇಳುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

೧೧-೧೦ ಎ. ಎಂ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷರೇ, ಮುಳುಗಡೆಯಾಗತಕ್ಕಂಥ ಪ್ರದೇಶ ಸುಮಾರು ೨೫ ಸಾವಿರ ಎಕರೆ, ಇದರಲ್ಲಿ ಮೂಲತಿ ರಿಸರ್ವಾಯರ್ ಬಿಟ್ಟು ೬೩೫ ಎಕರೆ, ಇದರಲ್ಲಿ ೩೧೫ ಎಕರೆ ಫಾರೆಸ್ಟ್ ಏರಿಯಾ ಸೇರುತ್ತದೆ ಮತ್ತು ಒಂದು ಮಂದಗೆದ್ದೆ ಎನ್ನುವ ಹಳ್ಳಿ ಕೂಡಾ ಮುಳುಗಡೆಯಾಗುತ್ತದೆ. ಶಿವಮೊಗ್ಗದಲ್ಲಿ ೫೫೫೦ ಎಕರೆ, ಚಿತ್ರದುರ್ಗ ಜಿಲ್ಲೆಯಲ್ಲಿ ೧೪೨.೭೮೦ ಎಕರೆ ಧಾರವಾಡ ಡಿಸ್ಟ್ರಿಕ್ಟ್‌ನ ರಾಣೆಬೆನ್ನೂರು ತಾಲ್ಲೂಕಿನಲ್ಲಿ ೧ ಲಕ್ಷ ೬ ಸಾವಿರ ಎಕರೆ ಹಿರೇಕೆರೂರು ತಾಲ್ಲೂಕಿನಲ್ಲಿ ೨೭ ಸಾವಿರ ಎಕರೆ, ಹಾವೇರಿಯಲ್ಲಿ ೭೪ ಸಾವಿರ ಎಕರೆ, ಹಾನಗಲ್ ತಾಲ್ಲೂಕಿನಲ್ಲಿ ೪ ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಈ ಯೋಜನೆ ಇನ್ನೂ ಆನ್ವೇಷಣಾ ಹಂತದಲ್ಲಿಯೇ ಇದೆ. ಎಲ್ಲಾ ಅಂಶಗಳನ್ನು ಇನ್‌ವೆಸ್ಟಿಗೇಟ್ ಮಾಡಿ ಬಂದ ನಂತರ ಮಂಜೂರು ಮಾಡಿ ಕೇಂದ್ರ ಸರ್ಕಾರದ ಒಪ್ಪಿಗಾಗಿ ಕಳುಹಿಸಲಾಗುತ್ತದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಬಿ ಕೋಳಿವಾಡ್.—ಮುಳುಗಡೆ ಆಗತಕ್ಕಂಥ ವಿಷಯದ ಬಗ್ಗೆ ಅಧಿಕಾರಿಗಳು ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಒದಗಿಸಿದ್ದಾರೆನ್ನುವ ಸಂಶಯ ನನಗೆ ಬರುತ್ತದೆ. ನನ್ನ ತಿಳುವಳಿಕೆ ಪ್ರಕಾರ ಕೇವಲ ೨೫೦ ಎಕರೆ ಜಮೀನು ಮಾತ್ರ. ಉಳಿದೂ ಫಾರೆಸ್ಟ್ ಲಾಂಡ್ ಮುಳುಗಡೆಯಾಗುತ್ತದೆ. ಯಾವುದೇ ಹಳ್ಳಿ ಇದರಲ್ಲಿ ಮುಳುಗಡೆಯಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮತ್ತು ಈ ಪ್ರಾಜೆಕ್ಟ್

ರಿಪೋರ್ಟನ್ನು ಕನ್ಸಿಡರ್ ಮಾಡುತ್ತೇವೆಂದು ಸರ್ಕಾರ ಹೇಳುತ್ತಲೇ ಇರುತ್ತದೆ. ಸುಪಾರು, ಅಂದರೆ ೧೯೭೨ನೇ ಇಸವಿಯಿಂದಲೂ ಪ್ರತಿ ವರ್ಷವೂ ಪ್ರತಿ ಸೆಷನ್‌ನಲ್ಲೂ ನಾನು ಪ್ರಶ್ನೆ ಹಾಕುತ್ತಿದ್ದೇನೆ. ಪ್ರತಿ ಸಾರಿಯೂ ಈ ಯೋಜನೆಯು ಅನ್ವೇಷಣಾ ಹಂತದಲ್ಲಿ ಇದೆ ಎನ್ನುವ ಮಾತನ್ನು ಹೇಳುತ್ತಾರೆ. ಇನ್ನೆಷ್ಟು ದಿವಸಗಳಲ್ಲಿ ಕನ್ಸಿಡರ್ ಮಾಡುವುದನ್ನು ಮುಗಿಸಿ ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಳುಹಿಸಲಾಗುತ್ತದೆ ಎಂದು ಸ್ಪಷ್ಟವಾಗಿ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಸದಸ್ಯರು ಕೇಳಿದ ಹಾಗೆ ನಿರ್ದಿಷ್ಟವಾಗಿ ತಾರೀಖಿನ್ನು ಹೇಳುವುದು ಕಷ್ಟ. ಇದಕ್ಕೆ ಹಲವಾರು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಟೆಕ್ನಿಕಲ್ ಕಮಿಟಿ ಮುಂದೆ ಹೋಗಬೇಕಾಗುತ್ತದೆ. ನಂತರ ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ಪಂತ್ತು ಕ್ಯಾಬಿನೆಟ್ ಮುಂದೆ ಹೋಗಿ ಅಲ್ಲೆಲ್ಲಾ ಅಪ್ರೂವ್ ಆದಮೇಲೆ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಬೇಕಾಗುತ್ತದೆ ಎಲ್ಲಕ್ಕಿಂತ ಹೆಚ್ಚಾಗಿ ಈ ಯೋಜನೆಗೆ ೩೧೫ ಎಕರೆ ಫಾರೆಸ್ಟ್ ಲ್ಯಾಂಡ್ ಹೋಗುತ್ತದೆ. ಇದಕ್ಕೆ ಒಪ್ಪಿಗೆ ಕೊಡತಕ್ಕಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆಯೇ ಹೊರತು ರಾಜ್ಯ ಸರ್ಕಾರಕ್ಕಿಲ್ಲ. ಇದರ ಬಗ್ಗೆ ಎಲ್ಲಾ ಕೆಲಸಗಳನ್ನು ಆದಷ್ಟು ಬೇಗ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಎರಡು ಭಾಗವಾಗಿದೆ. ಒಂದು ತುಂಗಾ ಮೇಲ್ದಂತೆ ಯೋಜನೆ ಬೇರೆ, ಮತ್ತೊಂದು ಮಾಲತಿ ಯೋಜನೆ. ಮಾಲತಿ ಯೋಜನೆಯನ್ನು ಕೈ ಬಿಟ್ಟು ತುಂಗಾ ಯೋಜನೆ ಕಾರ್ಯಗತವಾಗತಕ್ಕಂಥಾ ಯೋಜನೆ ಸರ್ಕಾರ ಮಾಡಿದೆಯೇ ? ಇಲ್ಲಿ ಸ್ವಲ್ಪ ಗೊತ್ತಾಗುವುದಿಲ್ಲ. ಅಪ್ಪರ್ ತುಂಗಾ ಬೇರೆ, ಈಗ ಇರುವುದು ಕ್ರಿಸ್ಟ್ ಗೇಟ್ ಹಾಕುವುದು. ೭ನೇ ಪಂಚವಾರ್ಷಿಕ ಯೋಜನೆಯಡಿಯಲ್ಲೇ ಈ ಮಾಲತಿ ಯೋಜನೆಯನ್ನು ಮಾಡುತ್ತೀರಾ ಅಥವಾ ೮ನೇ ಯೋಜನೆಯಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಇದನ್ನು ಮಾಡುವುದರಿಂದ ಆ ಭಾಗದ ಜನರ ಸಂಪೂರ್ಣ ವಿರೋಧ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ —ಮಾನ್ಯ ವಿರೋಧ ಪಕ್ಷದ ನಾಯಕರ ಪ್ರಶ್ನೆಗೆ ಉತ್ತರ ಹೇಳುವುದಾದರೆ, ನಾವು ಮಾಲತಿ ಯೋಜನೆಯನ್ನು ಈಗಾಗಲೇ ಕೈಬಿಟ್ಟಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಮತ್ತು ಈ ಯೋಜನೆಯು ಕಾರಿತು ಅನ್ವೇಷಣಾ ಹಂತದಲ್ಲಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ, ಈ ಬಗ್ಗೆ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸುತ್ತಾ ಇದ್ದೇನೆ.

ಶ್ರೀ ಕೆ.ಎಚ್. ಪಾಟೀಲ್ —ರಾಜ್ಯದಲ್ಲಿ ಯಾವುದೇ ಒಂದು ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಕೆಲವರಿಗೆ ಅನುಕೂಲವಾಗುತ್ತದೆ, ಇನ್ನು ಕೆಲವರಿಗೆ ಅನಾನುಕೂಲವಾಗುತ್ತದೆ. ಹೀಗೆ ಉಳಿದ ಯೋಜನೆಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡುವಂಥ ತುಂಗಭದ್ರಾ ಯೋಜನೆಯ ಬಗ್ಗೆ ಸರಕಾರ ಏಕೆ ನಿರ್ಲಕ್ಷ ತಳೆದಿದೆ ಎಂದು ಅರ್ಥವಾಗುತ್ತಿಲ್ಲ. ಅರಣ್ಯ ನಾಶವಾಗುತ್ತದೆ ಎಂದು ಯೋಜನೆಯನ್ನು ಕೈಬಿಡಲಾಗುವುದೆ ? ಇಂಥ ಯೋಜನೆಗಳಿಗೆ ಅರಣ್ಯ ಪ್ರದೇಶ ಹೋದರೂ ಅದಕ್ಕೆ ಕೇಂದ್ರ ಸರಕಾರದವರು ಅಡ್ಡ ಬರುವುದಿಲ್ಲ. ಇದಕ್ಕೆ ಕೇಂದ್ರ ದವರು ಪರ್ಮಿಶನ್ ಕೊಡುತ್ತಾರೆ. ಆದುದರಿಂದ ತುಂಗಭದ್ರಾ ಯೋಜನೆಯ ಬಗ್ಗೆ ನಿಶ್ಚಿತವಾದ ಒಂದು ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಯಬೇಕು. ಗುಲ್ಬರ್ಗ ಭಾಗದಲ್ಲಿ ಇಂಥ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ಅದೇ ರೀತಿಯಲ್ಲಿ ಹರಿಹರ ಭಾಗದ ಜನರಿಗೆ ನೀರಾವರಿ ಕುರಿತು ಆಗಿರುವಂಥ ಅನ್ಯಾಯವನ್ನು ದೂರ ಕರಿಸುತ್ತಾರೆ ಎಂಬ ವಿಶ್ವಾಸ ನಮಗಿದೆ. ಆದುದರಿಂದ ತುಂಗಭದ್ರಾ ಯೋಜನೆಯ ಬಗ್ಗೆ ಒಂದು ಸ್ಪೆಷಲ್ ಟೀಮನ್ನು ಮಾಡಿ ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ಕೆಲಸ ಪ್ರಾರಂಭಿಸುತ್ತಾರೋ ಎಂದು ದಯವಾಡಿ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಯೋಜನಾ ವರದಿಯು ಬಂದ ನಂತರ ಆ ಬಗ್ಗೆ ಪರಿಶೀಲಿಸುತ್ತೇನೆ ಎಂದು ಹೇಳಬಯಸುತ್ತೇನೆ.

(ಮೂರನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ ಸಂಖ್ಯೆ ೫೨. ಮಾನ್ಯ ಸದಸ್ಯರಾದ ಶ್ರೀ ಎ. ನಾಗರಾಜ್ ಅವರು ಗೈರು ಹಾಜರಾಗಿದ್ದಾರೆ)

ಅಲ್ಪಕಾಲವಧಿ ಪ್ರಶ್ನೆ : ಶ್ರೀ ಎಂ.ವಿ. ವೆಂಕಟಪ್ಪ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಈ ಅಲ್ಪಕಾಲಾವಧಿ ಪ್ರಶ್ನೆಗೆ ನಾನು ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಶ್ರೀ ಎಂ.ವಿ. ವೆಂಕಟಪ್ಪನವರ ಪ್ರಶ್ನೆಯನ್ನು ನಾಳೆಗೆ ತೆಗೆದು ಕೊಳ್ಳಲಾಗುವುದು.